**Code No. 20 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರಥಮ ದರ್ಜೆ — ಪ್ರಥಮ ಪತ್ರಿಕೆ

## (ವೇಗ)

ಜನವರಿ, 2018

ವೇಳೆ { ಉಕ್ತಲೇಖನ : 10 ನಿಮಿಷಗಳು
ಲಿಪಿ ಬರಹ : 1 ಗಂಟೆ 30 ನಿಮಿಷಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರು (200) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಮಾನ್ಯ ಸಭಾಧ್ಯಕ್ಷರೇ,

ಸರ್ಕಾರವು ಸಾಮಾಜಿಕ ನ್ಯಾಯದ
ಜೊತೆಗೆ ನಾಡಿನ ಅಭಿವೃದ್ಧಿಯ ಹೊಸ
ಚಿಂತನೆಗಳಿಗೆ, ಹೊಸ ಚಟುವಟಿಕೆಗಳಿಗೆ ಸದಾ
$\frac{1}{4}$ ಮಿ/ಡಿಯುತ್ತದೆ ಹಾಗೂ ತುಡಿಯುತ್ತದೆ.
ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಜಾಗತಿಕ
ಬಂಡವಾಳ ಹೂಡಿಕೆದಾರರ ಸಮಾವೇಶವೇ
$\frac{1}{2}$ ಇದಕ್ಕೆ ಸಾಕ್ಷಿ. ಈ ಮೇ/ಳದಲ್ಲಿ ಭಾಗಿಯಾಗಿದ್ದ
ಹಲವಾರು ರಾಷ್ಟ್ರೀಯ ಮತ್ತು
ಅಂತರರಾಷ್ಟ್ರೀಯ ಖ್ಯಾತಿಯ ಕೈಗಾರಿಕಾ
ದಿಗ್ಗಜರು, ಬಹುರಾಷ್ಟ್ರೀಯ ಕಂಪನಿಗಳು
$\frac{3}{4}$ ನಮ್ಮ ರಾಜ್ಯದ ಕೈ/ಗಾರಿಕಾ ನೀತಿ ಮತ್ತು
ಉದ್ಯಮಸ್ನೇಹಿ ವಾತಾವರಣವನ್ನು ಮುಕ್ತ
ಕಂಠದಿಂದ ಪ್ರಶಂಸೆ ಮಾಡಿದ್ದಾರೆ. ಈ ಜಾಗತಿಕ
ಬಂಡವಾಳ ಹೂಡಿಕೆ ಸಮಾವೇಶದಿಂದX 1
ಗಣನೀಯ ಪ್ರಮಾಣದ ಬಂಡವಾಳ
ಹೂಡಿಕೆಯೂ ಹರಿದು ಬರಲಿದೆ.

ಸರ್ಕಾರದ ಬಹುತೇಕ ಯೋಜನೆ
ಮತ್ತು ಕಾರ್ಯಕ್ರಮಗಳ ಯಶಸ್ಸು ಆಯಾ
ಯೋಜನೆ/ಗಳ ಅಂತಿಮ ಹಂತದ ಅಂದರೆ $\frac{1}{4}$
ಕೊನೆ ಮೈಲು ಸಂಪರ್ಕವನ್ನು ಆಧರಿಸಿದೆ.
ನಮ್ಮ ಸರ್ಕಾರವು ಈ ಅಂಶಕ್ಕೆ ಹೆಚ್ಚು ಒತ್ತು
ನೀಡಿ ನೀರಾವರಿ, ರಸ್ತೆ, ಸಾರಿಗೆ,/ ಅನಿಲ $\frac{1}{2}$
ಸಂಪರ್ಕ, ಮಾನವ ಸಂಪನ್ಮೂಲ ಮತ್ತು

[ Tun over

ಆಡಳಿತ ಕ್ಷೇತ್ರಗಳಲ್ಲಿ ಕೊನೆ ಮೈಲು ಸಂಪರ್ಕ
$\frac{3}{4}$ ವ್ಯವಸ್ಥೆಗೆ ಅಗತ್ಯವಾದ ಅನು/ದಾನವನ್ನು
ನೀಡುತ್ತದೆ. ಸರ್ಕಾರದ ಪ್ರಗತಿಪರ
ಕಾರ್ಯನೀತಿ ಮತ್ತು ಆಯುವ್ಯಯ
ಬೆಂಬಲದಿಂದಾಗಿ ನಮ್ಮ ರಾಜ್ಯವು ಹಲವಾರು
2 ರಾಷ್ಟ್ರೀಯ ಸಾಧನೆ ಮತ್ತುX ಮನ್ನಣೆಗೆ
ಪಾತ್ರವಾಗಿದೆ.

ರಾಜ್ಯದ ರೈತರ ಸಂಕಷ್ಟವನ್ನು
ನಿವಾರಣೆ ಮಾಡಲು ಹಾಗೂ ಕೃಷಿ ಮತ್ತು
ಇತರೆ ಇಲಾಖೆಗಳ ಕಾರ್ಯಕ್ರಮಗಳನ್ನು
$\frac{1}{4}$ ಒಗ್ಗೂ/ಡಿಸಲು ಮುಖ್ಯಮಂತ್ರಿಗಳ
ಅಧ್ಯಕ್ಷತೆಯಲ್ಲಿ "ಕರ್ನಾಟಕ ರಾಜ್ಯ ಕೃಷಿ
ಮತ್ತು ರೈತರ ಕಲ್ಯಾಣ ಸಮಿತಿ"ಯನ್ನು ರಚಿಸಿ.
$\frac{1}{2}$ ಸದರಿ ಸಮಿತಿಯಲ್ಲಿ ಕೃಷಿ ಮ/ತ್ತು ರೈತರ
ಕಲ್ಯಾಣಕ್ಕೆ ಸಂಬಂಧಿಸಿದ ಇತರೆ ಇಲಾಖೆಗಳನ್ನು
ಒಂದೆಡೆ ತರಲಾಗುವುದು. ಇಂತಹ ಸಮಿತಿಗಳ
$\frac{3}{4}$ ಮೂ/ಲಕ ಜಿಲ್ಲಾ, ತಾಲ್ಲೂಕು ಹಾಗೂ
ಹೋಬಳಿ ಮಟ್ಟದಲ್ಲಿ ಇನ್ನೂ ಹೆಚ್ಚಿನ
ಸಮನ್ವಯತೆಯನ್ನು ಸಾಧಿಸಲಾಗುವುದು.

3 ವಿವಿಧ ಕೈಗಾರಿಕೆಗಳಿಗಾಗಿ ರಚಿಸಿರುXವ
ವಿಶೇಷ ಆರ್ಥಿಕ ವಲಯಗಳ ಮಾದರಿಯಲ್ಲಿ
ರಾಜ್ಯದ ವಿವಿಧ ಭಾಗಗಳಲ್ಲಿ ವಿಶೇಷ ಕೃಷಿ
ವಲಯಗಳನ್ನು ಗುರುತಿಸಿ ರೈತರು ಹಾಗೂ $\frac{1}{4}$
ಅ/ವರು ಅಳವಡಿಸಬಹುದಾದ ಪರಿಣಾಮಕಾರಿ
ತಂತ್ರಜ್ಞಾನಗಳ ಬಗ್ಗೆ ಹೆಚ್ಚಿನ ಒತ್ತು
ನೀಡಲಾಗುವುದು.

ರಾಜ್ಯದ ಪ್ರತಿ ಕಂದಾಯ
ವಿಭಾಗಕ್ಕೊಂದರಂ/ತೆ ನಾಲ್ಕು ಜಿಲ್ಲೆಗಳಲ್ಲಿ $\frac{1}{2}$
ಒಟ್ಟು ನೂರು ಗ್ರಾಮಗಳನ್ನು ಮಾದರಿ
ಕೃಷಿ ಗ್ರಾಮಗಳನ್ನಾಗಿ ಮಾಡಲು "ಸುವರ್ಣ
ಕೃಷಿ ಗ್ರಾಮ" ಯೋಜನೆಯನ್ನು ಜಾರಿಗೆ
ತರಲಾಗು/ವುದು. ಈ ಗ್ರಾಮಗಳ ಕೃಷಿ $\frac{3}{4}$
ಹಾಗೂ ಸಂಬಂಧಿತ ಇಲಾಖೆಗಳ ಎಲ್ಲಾ
ಯೋಜನೆಗಳನ್ನು ಒಗ್ಗೂಡಿಸಿಕೊಂಡು
ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು.X 4

ಕೃಷಿ ಹಾಗೂ ಕೃಷಿ ಸಂಬಂಧಿತ
ಚಟುವಟಿಕೆಗಳಿಗೆ ನೆರವಾಗುವ ಹೊಸ
ಆವಿಷ್ಕಾರ ತಂತ್ರಜ್ಞಾನಗಳನ್ನು ಬಳಸಿ
ಉದ್ದಿಮೆ ಸ್ಥಾಪಿಸಲು ರಾಜ್ಯ ಸರ್ಕಾ/ರವು $\frac{1}{4}$
ಪ್ರಾರಂಭಿಕ ಹಣಕಾಸು ನೆರವು ನೀಡಲು
'ಕೃಷಿ ನವೋದ್ಯಮ' ಅನುಷ್ಠಾನಗೊಳಿಸಲು
10 ಕೋಟಿ ರೂಪಾಯಿಗಳ ಅನುದಾನವನ್ನು
ಒದಗಿಸಲಾ/ಗುವುದು. ರಾಜ್ಯದಲ್ಲಿನ ಕೃಷಿ $\frac{1}{2}$
ಮತ್ತು ಕೃಷಿಗೆ ಸಂಬಂಧಿಸಿದ ಬೋಧನೆಯಲ್ಲಿ
ತೊಡಗುವ ಕೃಷಿ ವಿಶ್ವವಿದ್ಯಾನಿಲಯಗಳಿಗೆ

$\frac{3}{4}$ ಅವಕಾಶ. ಪರಿಶಿಷ್ಟ ಜಾ/ತಿ ಮತ್ತು ಪರಿಶಿಷ್ಟ
ಪಂಗಡಗಳ ರೈತರು ತೋಟಗಾರಿಕೆಯ
ಲಾಭವನ್ನು ಪಡೆಯಲು ಪ್ರೋತ್ಸಾಹಿಸುವ
ಸಲುವಾಗಿ ಹೊಸ ಯೋಜನೆಯನ್ನು
5 ಜಾರಿಗೊಳಿಸXಲಾಗುವುದು. ಫಲಾನುಭವಿಗಳಿಗೆ
ಬೀಜ ವಿತರಣೆಯ ಹಂತದಿಂದ ಮಾರುಕಟ್ಟೆ
ಹಂತದವರೆಗೆ ಬೆಂಬಲ ನೀಡಲಾಗುವುದು.
$\frac{1}{4}$ ಆಸ್ತಿಗಳನ್ನು ದಕ್ಷತೆ/ಯಿಂದ ಬಳಸಿಕೊಳ್ಳುವುದನ್ನು
ಖಚಿತಪಡಿಸಲು ಫಲಾನುಭವಿಗಳು ಹನಿ
ನೀರಾವರಿ ಯೋಜನೆಯಡಿ ಕ್ಷೇತ್ರದಲ್ಲಿ
$\frac{1}{2}$ ಅಳವಡಿಸುವ ಬೆಳೆ ಅಂತರ/ಕ್ಕೆ ಅನುಗುಣವಾಗಿ
ಘಟಕ ವೆಚ್ಚದ ಶೇಕಡ 90 ರಷ್ಟು ಸಹಾಯ
ಒದಗಿಸಲಾಗುವುದು.

ರಾಜ್ಯದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ
$\frac{3}{4}$ ಸಹಕಾರ ಸಂ/ಘಗಳನ್ನು ಮುಂದಿನ ಮೂರು
ವರ್ಷಗಳಲ್ಲಿ ಹಂತ ಹಂತವಾಗಿ ಗಣಕೀಕರಣ
ಗೊಳಿಸಲಾಗುವುದು. ಗೃಹ ನಿರ್ಮಾಣ ಸಹಕಾರ
6 ಸಂಘಗಳಲ್ಲಿ ಜಮೀನುX ಖರೀದಿ ಹಾಗೂ
ನಿವೇಶನಗಳ ಸಕಾಲಿಕ ಹಂಚಿಕೆ ಹಾಗೂ
ಅವುಗಳ ಕಾರ್ಯನಿರ್ವಹಣೆಯಲ್ಲಿ
ಪಾರದರ್ಶಕತೆ ತರಲು ಅನುವಾಗುವಂತೆ ಗೃಹ
$\frac{1}{4}$ ನಿ/ರ್ಮಾಣ ಸಹಕಾರ ಸಂಘಗಳಿಗೆ ಪ್ರತ್ಯೇಕ
ಅಧ್ಯಾಯವನ್ನು ಸೇರ್ಪಡೆ ಮಾಡಲು ಕರ್ನಾಟಕ
ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ
ತಿದ್ದುಪ/ಡಿ ತರಲಾಗುವುದು. ನಿರಂತರ $\frac{1}{2}$
ವಿದ್ಯುತ್ ಒದಗಿಸಿ ರೈತರಿಗೆ ಲಾಭದಾಯಕ
ಬೆಲೆ ಒದಗಿಸಲು ಮಾರಾಟ ವ್ಯವಸ್ಥೆ ಕಲ್ಪಿಸಿ
ಅನುಷ್ಠಾನಗೊಳಿಸ/ಲಾಗುವುದು. $\frac{3}{4}$

ದೇಶದಲ್ಲಿಯೇ ಮೊದಲ ಬಾರಿಗೆ ನಮ್ಮ
ರಾಜ್ಯದಲ್ಲಿ ಪ್ರಾಥಮಿಕ ಕೃಷಿ ಉತ್ಪನ್ನ
ಮಾರುಕಟ್ಟೆ ಸಮಿತಿಯನ್ನು ರಚನೆ
ಮಾಡಲಾಗಿದೆಯೆಂದರು.X 7

ಮುಖ್ಯ ಕಾರ್ಯದರ್ಶಿಯವರಿಂದ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ಕಾರ್ಯದರ್ಶಿಯವರು ಮತ್ತು ಎಲ್ಲಾ
ಇ/ಲಾಖಾ ಮುಖ್ಯಸ್ಥರು ರಾಜ್ಯದ ಹೊರಗಿನ $\frac{1}{4}$
ಮತ್ತು ಒಳಗಿನ ಪ್ರವಾಸದ ಮಂಜೂರಾತಿಗೆ
ಸಂಬಂಧಿಸಿದ ಸರ್ಕಾರಿ ಆದೇಶಗಳನ್ನು
ಪರಿಶೀಲಿಸಲಾಗಿದೆ./ ಈ ವಿಷಯದ ಮೇಲೆ $\frac{1}{2}$
ಸರ್ಕಾರಿ ಆದೇಶಗಳು ಜಾರಿಗೆ ಬರುವುದಕ್ಕೆ
ಮುಂಚಿತವಾಗಿ ಪ್ರವಾಸಗಳಿಗೆ ಹೋಗುವವರು
ಮುಖ್ಯ ಕಾರ್ಯದರ್ಶಿಯವರ ಅನು/ಮತಿ $\frac{3}{4}$
ಪಡೆಯುವುದು ಅವಶ್ಯಕವಿತ್ತು. ಈಗ
ನಿರ್ಬಂಧ ಇಲ್ಲದೆ ಇರುವುದರಿಂದ ಹಿರಿಯ

[ Turn over

ಮತ್ತು ಅವರ ಅಧೀನ ಅಧಿಕಾರಿಗಳು
8 ವಿಧಾನಸಭೆ ಮXತ್ತು ವಿಧಾನಪರಿಷತ್ತಿನ
ಅಧಿವೇಶನದ ಸಮಯದಲ್ಲೂ ಪ್ರವಾಸ
ದಲ್ಲಿರುವುದು ಕಂಡುಬಂದಿದೆ. ವಿಧಾನಸಭೆ
$\frac{1}{4}$ ಮತ್ತು ವಿಧಾನಪರಿಷತ್ತಿನ ಅದಿ/ವೇಶನದ
ಅವಧಿಯಲ್ಲಿ ಸರ್ಕಾರದ ಕಾರ್ಯದರ್ಶಿಯವರು
ರಾಜ್ಯದ ಒಳಗೆ ಮತ್ತು ಹೊರಗಡೆ ಪ್ರವಾಸ
$\frac{1}{2}$ ಕೈಗೊಳ್ಳಬೇಕಾದರೆ ಸಂಬಂಧಪಟ್ಟ ಮಂತ್ರಿಗ/ಳ
ಅನುಮೋದನೆಯನ್ನು ಮುಖ್ಯ ಕಾರ್ಯದರ್ಶಿಯವರ
ಮುಖಾಂತರ ಪಡೆಯತಕ್ಕದ್ದು. ಇತರ
ಸಮಯಗಳಲ್ಲಿ ರಾಜ್ಯದ ಒಳಗೆ ಪ್ರವಾಸ
$\frac{3}{4}$ ಕೈಗೊಳ್ಳಬೇಕಾ/ದ ಸಮಯದಲ್ಲಿ ಮುಖ್ಯ
ಕಾರ್ಯದರ್ಶಿಯವರಿಗೆ ತಮ್ಮ ಪ್ರವಾಸದ
ಕಾರ್ಯಕ್ರಮವನ್ನು ತಿಳಿಸಬೇಕು. ರಾಜ್ಯದ
9 ಹೊರಗೆ ಪ್ರವಾಸ ಮಾಡಬೇಕಾದರೆX ಮುಖ್ಯ
ಕಾರ್ಯದರ್ಶಿಯವರ ಪೂರ್ವಾನುಮತಿಯನ್ನು
ಪಡೆಯಬೇಕು. ಎಲ್ಲಾ ಇಲಾಖಾ
ಮುಖ್ಯಸ್ಥರು ವಿಧಾನಸಭೆ ಮತ್ತು
ವಿಧಾನಪರಿಷತ್ತಿನ ಅಧಿವೇಶನ/ ನಡೆಯುವ $\frac{1}{4}$
ಅವಧಿಯಲ್ಲಿ ಪ್ರವಾಸ ಕೈಗೊಳ್ಳಬೇಕಾದರೆ
ಮುಖ್ಯ ಕಾರ್ಯದರ್ಶಿಯವರ ಅನುಮೋದನೆ
ಯನ್ನು ಸಂಬಂಧಪಟ್ಟ ಇಲಾಖೆಯ
ಕಾರ್ಯದರ್ಶಿಯವ/ರ ಮೂಲಕ ಪಡೆಯಬೇಕು $\frac{1}{2}$
ಎಂದು ಎಲ್ಲಾ ಇಲಾಖಾ ಕಾರ್ಯದರ್ಶಿಯವರಿಗೆ
ಹಾಗೂ ಎಲ್ಲಾ ಇಲಾಖಾ ಮುಖ್ಯಾಧಿಕಾರಿಯವರಿಗೆ
ಈ ಮೂಲಕ ಸೂಚಿಸಿ ಆದೇಶ/ $\frac{3}{4}$
ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿಗಳು,

(ರಾಜು)
ಮುಖ್ಯ ಕಾರ್ಯದರ್ಶಿಯವರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ವಿಧಾನಸೌಧ,
ಬೆಂಗಳೂರು.X 10